(80)

(13)

16/01

## ಕರ್ನಾಟಕ ವಿಧಾನ ಪರಿಷತ್ತು
## ಗಮನ ಸೆಳೆಯುವ ಸೂಚನೆ

**ವಿಷಯ: ಶ್ರೀ ಶಿವಕುಮಾರ್. ಕೆ ಮಾನ್ಯ ವಿಧಾನ ಪರಿಷತ್ ಸದಸ್ಯರು, ಇವರ ಗಮನ ಸೆಳೆಯುವ ಸೂಚನೆಗೆ ಇಲಾಖೆಯ ಉತ್ತರ.**

**ಪ್ರಶ್ನೆ:** ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ರಾಮಾಪುರ ಮತ್ತು ಸುತ್ತಮುತ್ತ ಗ್ರಾಮಗಳಲ್ಲಿ ಅಂತರ್ಜಲ ಕುಸಿತ ಹಾಗೂ ನೀರಿನಲ್ಲಿ ಫ್ಲೋರೈಡ್ (Flouride) ಅಂಶವು ಮಿತಿಮೀರಿರುವುದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ಉಂಟಾಗುತ್ತಿರುವ ಗಂಭೀರ ಪರಿಣಾಮಗಳ ಕುರಿತು ಗಮನ ಸೆಳೆಯುವ ಪ್ರಶ್ನೆಗೆ ಉತ್ತರ.

**ಉತ್ತರ:** ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ರಾಮಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಒಟ್ಟು 10 ಜನವಸತಿ ಪ್ರದೇಶಗಳು ಅರಣ್ಯ ಪ್ರದೇಶದಿಂದ ಸುತ್ತುವರದಿದ್ದು, ಬೆಟ್ಟಗುಡ್ಡಗಳ ಪ್ರದೇಶವಾಗಿರುತ್ತದೆ, ಈ ಪ್ರದೇಶದಲ್ಲಿ ಕಳೆದ ಸಾಲಿನಲ್ಲಿ 597 ಮಿಲಿ ಮೀಟರ್ ಮಳೆಯಾಗಿದ್ದು, ಸರಾಸರಿ ಮಳೆ ಪ್ರಮಾಣಕ್ಕಿಂತ ಶೇ. 25% ರಷ್ಟು ಕಡಿಮೆ ಮಳೆಯಾಗಿರುತ್ತದೆ. ಇಳಿಜಾರು ಪ್ರದೇಶಗಳಲ್ಲಿ ಮಳೆಯ ನೀರು ಸರಾಗವಾಗಿ ಹರಿಯುವುದರಿಂದ ಈ ಪ್ರದೇಶದಲ್ಲಿ ಮಳೆಯ ನೀರು ಅಂತರ್ಜಲ ಸೇರುವ ಸಾಧ್ಯತೆಗಳು ಕಡಿಮೆಯಿರುತ್ತದೆ. ಪ್ರಸ್ತುತ ಅಂತರ್ಜಲವು 600-800 ಅಡಿಯಲ್ಲಿದ್ದು, ಅಂತರ್ಜಲ ಅಭಿವೃದ್ಧಿ ಇಲಾಖೆಯ ಮಾಹಿತಿಯಂತೆ 2024-25 ರಲ್ಲಿ 7.74 ಮೀಟರ್(25.4 ಅಡಿ) ನಷ್ಟು ಅಂತರ್ಜಲ ಮಟ್ಟವು ಕುಸಿತವಾಗಿರುವುದು ವರದಿಯಾಗಿರುತ್ತದೆ.

ರಾಮಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡುವ ಎಲ್ಲಾ ಜನವಸತಿಗಳ ಪ್ರದೇಶಗಳ, 2025-26 ನೇ ಸಾಲಿನ Pre- Monsoon ಹಾಗೂ Post- Monsoon ನೀರಿನ ಗುಣಮಟ್ಟದ ಪರೀಕ್ಷೆಗಳನ್ನು ಕೈಗೊಳ್ಳಲಾಗಿದ್ದು, ಫ್ಲೋರೈಡ್ (Flouride) ಅಂಶವು ಅನುಮತಿಸುವ ಮಿತಿಯಲಿದ್ದು, ಹೆಚ್ಚಾಗಿರುವುದು ಕಂಡು ಬಂದಿರುವುದಿಲ್ಲ (It is within Permissible Limit of 1-1.5 mg/L). ಪರೀಕ್ಷೆಗೆ ಒಳಪಡಿಸಿರುವ ಎಲ್ಲಾ ಜಲಮೂಲಗಳ ನೀರು ಕುಡಿಯಲು ಯೋಗ್ಯವಾಗಿದೆ ಎಂದು ವರದಿಯಾಗಿರುತ್ತದೆ.

ಮುಂದುವರೆದು ರಾಮಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡುವ 10 ಜನವಸತಿಗಳ ಪೈಕಿ 9 ಜನವಸತಿಗಳಲ್ಲಿ ಇದುವರೆವಿಗೂ ಅನುಷ್ಠಾನಗೊಳಿಸಿರುವ ಕಿರು ನೀರು ಸರಬರಾಜು ಯೋಜನೆ, ಕೊಳವೆ ನೀರು ಸರಬರಾಜು ಯೋಜನೆ ಮತ್ತು ಕೈಪಂಪಿಗಾಗಿ ಕೊಳವೆಬಾವಿ ಹಾಗೂ ಶುದ್ಧ ಕುಡಿಯುವ ನೀರಿನ ಘಟಕಗಳಿಂದ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಮಾಮರದೊಡ್ಡಿ ಗ್ರಾಮದಲ್ಲಿನ ಜಲಮೂಲಗಳ ಇಳುವರಿ ತುಂಬಾ ಕಡಿಮೆ ಇದ್ದ ಕಾರಣ ಸದರಿ ಗ್ರಾಮಕ್ಕೆ ಖಾಸಗಿ ಕೊಳವೆ ಬಾವಿಗಳಿಂದ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ.

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು
ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು